ಮೋದಕ ಸೇವಾ ಸಂವತ್ಸರ ಸಮಾರೋಪ ಸಮಾರಂಭ । ಬಸವರಾಜ ಹೊರಟ್ಟಿ, ಬಾಳೇಸರ ಅವರಿಗೆ ಪ್ರಶಸ್ತಿ ಪ್ರದಾನ

# ಸಂಕಲ್ಪ ಗಟ್ಟಿಯಾಗಿದ್ದರೆ ಸಾಧನೆ ಸಿದ್ಧಿ



ಸಿದ್ದಾಪುರ ತಾಲೂಕಿನ ಕಲಗದ್ದೆಯ ಶ್ರೀ ನಾಟ್ಯವಿನಾಯಕ, ಲಲಿತಾ ರಾಜರಾಜೇಶ್ವರಿ ದೇವಾಲಯದಲ್ಲಿ ನಡೆದ ಮೋದಕ ಸಂವತ್ಸರದ ಸಮಾರೋಪದಲ್ಲಿ ಬಸವರಾಜ ಹೊರಟ್ಟಿಯವರಿಗೆ "ರಾಜಮಾನ್ಯ ಪ್ರಶಸ್ತಿ" ಪ್ರದಾನ ಮಾಡಲಾಯಿತು.



ಆರ್.ಎಂ.ಹೆಗಡೆ ಬಾಳೇಸರ ಅವರಿಗೆ "ಸಿಂಧೂರಶ್ರೀ ಪ್ರಶಸ್ತಿ" ಪ್ರದಾನ ಮಾಡಲಾಯಿತು.

ಸಿದ್ದಾಪುರ: ಶಿವಲಿಂಗದಲ್ಲಿ ಅದ್ವಿತೀಯ ಶಕ್ತಿಯಿದೆ. ಶಿವನ ಬಗ್ಗೆ ಶುದ್ಧ ಸ್ಫಟಿಕದ ಬಗ್ಗೆ ಪಾರದರ್ಶಕವಾದದ್ದು, ಸ್ಫಟಿಕಲಿಂಗ ಆ ಕಾರಣದಿಂದ ಎಲ್ಲಕ್ಕಿಂತ ವಿಶೇಷ. ನಾವು ದೇವರಲ್ಲಿ ಕೋರಬೇಕಾದ ವರವೆಂದರೆ ಸ್ಫಟಿಕದಂಥ ಪರಿಶುದ್ಧ ಮನಸ್ಸನ್ನು ಕರುಣಿಸು ಎನ್ನುವುದಾಗಿ ಎಂದು ಶ್ರೀರಾಮಚಂದ್ರಾಪುರಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಹೇಳಿದರು.

ಅವರು ತಾಲೂಕಿನ ಕಲಗದ್ದೆಯ ಶ್ರೀ ನಾಟ್ಯವಿನಾಯಕ, ಲಲಿತಾ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಕಳೆದ 8 ತಿಂಗಳಿನಿಂದ ನಡೆಯುತ್ತ ಬಂದ ಮೋದಕ ಸೇವಾಸಂವತ್ಸರದ ಸಮಾರೋಪದಲ್ಲಿ ರಾಜಮಾನ್ಯ ಹಾಗೂ ಸಿಂಧೂರಶ್ರೀ ಪ್ರಶಸ್ತಿ ಪ್ರದಾನ ಮಾಡಿ ಆಶೀರ್ವಚನ ನೀಡಿದರು.

ಆಸೆ ಪ್ರಬಲವಾಗಿದ್ದರೆ ಸಂಕಲ್ಪ, ಸಂಕಲ್ಪ ಗಟ್ಟಿಯಾಗಿದ್ದರೆ ಸಾಧನೆ, ಸಾಧನೆ ದೃಢವಾಗಿದ್ದರೆ ಸಿದ್ಧಿ. ಯಾವುದೇ ಕಾರ್ಯ ಕೈಗೂಡಲು ಈ ನಾಲ್ಕು ಅಗತ್ಯ. ಶ್ರೀ ಶಂಕರರ ಸಂಕಲ್ಪ ದೃಢವಾಗಿರುವುದಕ್ಕೆ ಶ್ರೀ ಮಠವು ಸಾವಿರಾರು ವರ್ಷಗಳಿಂದ ಕ್ರಿಯಾಶೀಲವಾಗಿ ನಡೆದುಕೊಂಡುಬಂದಿದೆ. ಮುಂದಿನ ಸಹಸ್ರ ವರ್ಷಗಳಲ್ಲೂ ಮುನ್ನಡೆಯಲಿದೆ. ವಿನಾಯಕ ಹೆಗಡೆ ಗಟ್ಟಿಯಾದ ಸಂಕಲ್ಪದಿಂದ ಶ್ರೀ ನಾಟ್ಯವಿನಾಯಕ, ನಂತರದಲ್ಲಿ ಶ್ರೀ ಲಲಿತಾ ರಾಜರಾಜೇಶ್ವರಿ, ಈಗ ಶ್ರೀ ಕಾಮೇಶ್ವರ ದೇವರುಗಳನ್ನು ಗುರು ಸಹಿತವಾಗಿ ಈ ಸ್ಥಳದಲ್ಲಿ ಸಾನ್ನಿಧ್ಯಗೊಳಿಸಿದ್ದಾರೆ ಎಂದರು.

ಶಿರಳಗಿ ಶ್ರೀ ಚೈತನ್ಯ ರಾಜಾರಾಮ ಕ್ಷೇತ್ರದ ಶ್ರೀ ಬ್ರಹ್ಮಾನಂದಭಾರತೀ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು.

"ರಾಜಮಾನ್ಯ ಪ್ರಶಸ್ತಿ" ಸ್ವೀಕರಿಸಿ ಮಾತನಾಡಿದ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪ್ರಸಕ್ತ ದಿನಮಾನದಲ್ಲಿ ಅಪರಾಧ ಚಟುವಟಿಕೆಗಳು ಹೆಚ್ಚುತ್ತಿರುವುದಕ್ಕೆ ಮುಖ್ಯ ಕಾರಣ ಭಯ, ಭಕ್ತಿ, ಗುರುಹಿರಿಯರ ಬಗ್ಗೆ ಕುಂಠಿತವಾದ ತಿಳುವಳಿಕೆಯ ಕೊರತೆ. ಎಲ್ಲರಿಗೂ ಒಂದಿಲ್ಲೊಂದು ಚಿಂತೆ ಇದ್ದೇ ಇರುತ್ತದೆ. ಹಣದಿಂದ ಮಾತ್ರ ನೆಮ್ಮದಿ ದೊರೆಯುವುದಿಲ್ಲ. ಈವರೆಗೆ ದೊರೆತ ಎಲ್ಲ ಪ್ರಶಸ್ತಿಗಳಿಗಿಂತ ಪಕ್ಷಪಾತ, ಜಾತಿ, ಮತದ ಹಂಗಿಲ್ಲದ ಈ ಪ್ರಶಸ್ತಿ ಮಿಗಿಲಾದದ್ದು ಎಂದು ಭಾವಿಸಿದ್ದೇನೆ. ಉತ್ತರ ಕನ್ನಡ ಜಿಲ್ಲೆ ನನ್ನ ಅತ್ಮೀಯವಾದ ಜಿಲ್ಲೆ. ಈ ಕ್ಷೇತ್ರದ ಅಭಿವೃದ್ಧಿಗೆ ನನ್ನಿಂದಾದ ಸಹಕಾರ ಇರುತ್ತದೆ ಎಂದರು.

"ಸಿಂಧೂರಶ್ರೀ ಪ್ರಶಸ್ತಿ" ಸ್ವೀಕರಿಸಿ ಮಾತನಾಡಿದ ಹಿರಿಯ ಸಹಕಾರಿ, ಟಿ.ಎಂ.ಎಸ್.ಅಧ್ಯಕ್ಷ ಆರ್.ಎಂ.ಹೆಗಡೆ ಬಾಳೇಸರ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಮೋದಕ ಸೇವಾ ಸಮಿತಿ ಅಧ್ಯಕ್ಷ, ಶಾಸಕ ಭೀಮಣ್ಣ ನಾಯ್ಕ ಮಾತನಾಡಿದರು. ಮೋದಕ ಸೇವಾ ಸ್ವಾಗತ ಸಮಿತಿ ಅಧ್ಯಕ್ಷ ಡಾ.ಶಶಿಭೂಷಣ ಹೆಗಡೆ ದೊಡ್ಮನೆ ಉಪಸ್ಥಿತರಿದ್ದರು.

ಪ್ರಧಾನ ವಿಶ್ವಸ್ಥ ವಿನಾಯಕ ಹೆಗಡೆ ಕಲಗದ್ದೆ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಗಣಪತಿ ಹೆಗಡೆ ಗುಂಜಗೋಡ ನಿರೂಪಿಸಿದರು. ಮೋಹನ ಹೆಗಡೆ ಹೆರವಟ್ಟ, ರಾಘವೇಂದ್ರ ಬೆಟ್ಟಕೊಪ್ಪ ಸನ್ಮಾನಪತ್ರ ವಾಚಿಸಿದರು. ಇದಕ್ಕೂ ಮುನ್ನ ಶ್ರೀಗಳ ಭಿಕ್ಷಾಸೇವೆ, ಮೋದಕ ಹವನದ ಮಹಾಪೂರ್ಣಾಹುತಿ ಹಾಗೂ ರಥೋತ್ಸವ ಜರುಗಿತು.

> ಹೊರಟ್ಟಿ ಅವರು ಇಂದು ರಾಜಮಾನ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ, ನಿಜಕ್ಕೂ ಅವರು ರಾಜಮಾನ್ಯರು. ಮಠದಿಂದ ಐದು ಗೋವುಗಳನ್ನು ಒಯ್ದು ಇಂದು ನೂರಕ್ಕೂ ಹೆಚ್ಚು ಹಸುಗಳನ್ನು ಅವರು ಸಾಕುತ್ತಿರುವುದು ಶ್ರೀಮಠಕ್ಕೆ ಅವರು ಇಟ್ಟ ನಿಷ್ಠೆ-ಭಕ್ತಿಗೆ ಸಾಕ್ಷಿಯಾಗಿದೆ.
>
> ■ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಜಿ

> ಎಲ್ಲಿ ಭಕ್ತಿ ಮತ್ತು ನಿರಂತರ ಅನುಷ್ಠಾನ ನಡೆಯುತ್ತದೋ ಅಲ್ಲಿ ಸಾತ್ವಿಕ ತರಂಗಗಳು ಏರ್ಪಡುತ್ತವೆ. ದೈಹಿಕ ಕಾಯಿಲೆಗೆ ಆಸ್ಪತ್ರೆ ಇರುವಂತೆ, ಮಾನಸಿಕ ನೆಮ್ಮದಿ ಮತ್ತು ಶಾಂತಿಗಾಗಿ ದೇವಸ್ಥಾನಗಳು ಅವಶ್ಯಕ. ಭಕ್ತರ ಸಂಕಷ್ಟಗಳನ್ನು ನೀಗಿಸುವ ಜಾಗೃತ ಕ್ಷೇತ್ರವಾಗಿ ಈ ಕ್ಷೇತ್ರ ಬೆಳೆಯಲಿ.
>
> ■ ಶ್ರೀ ಬ್ರಹ್ಮಾನಂದ ಭಾರತೀ ಸ್ವಾಮಿಜಿ.

## ಗೋಡೆಯವರಿಗೆ "ಯಕ್ಷನಾಟ್ಯ ಅನುಗ್ರಹ ಪ್ರಶಸ್ತಿ" ಪ್ರದಾನ



ಗೋಡೆ ನಾರಾಯಣ ಹೆಗಡೆ ಅವರಿಗೆ "ಯಕ್ಷನಾಟ್ಯ ಅನುಗ್ರಹ ಪ್ರಶಸ್ತಿ" ನೀಡಿ ಗೌರವಿಸಲಾಯಿತು.

ಸಿದ್ದಾಪುರ: ತಾಲೂಕಿನ ಕಲಗದ್ದೆಯ ಶ್ರೀನಾಟ್ಯವಿನಾಯಕ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಮೋದಕ ಸೇವಾ ಸಂವತ್ಸರದ ಮಹಾ ಸಮಾರೋಪದಲ್ಲಿ ಮಂಗಳೂರಿನ ಅರೆಹೊಳೆ ನಂದಗೋಕುಲ ತಂಡದಿಂದ ನೃತ್ಯ ವೈಭವದ ಸಮರ್ಪಣೆ ನಡೆಯಿತು. ಅರೆಹೊಳೆ ಸೇವಾ ನಿರ್ದೇಶನದ ನೃತ್ಯಗಳು ನೆರೆದವರ ಗಮನ ಸೆಳೆದವು. ಕಾರ್ಯಕ್ರಮದ ಅಂಗವಾಗಿ ಸಂಘಟಿಸಿದ್ದ ಯಕ್ಷಗಾನ ಪ್ರತಿಷ್ಠಾನದಿಂದ "ಗದಾಯುದ್ಧ" ಆಖ್ಯಾನ ನಡೆಯಿತು. ಹಿಮ್ಮೇಳದಲ್ಲಿ ಕೇಶವ ಹೆಗಡೆ ಕೊಳಗಿ, ಶಂಕರ ಭಾಗವತ, ಗಣೇಶ ಗಾಂವಕರ ಸಹಕರಿಸಿದರೆ, ಮುಮ್ಮೇಳದಲ್ಲಿ ಗೋಡೆ ನಾರಾಯಣ ಹೆಗಡೆ, ವಿನಾಯಕ ಹೆಗಡೆ ಕಲಗದ್ದೆ, ಅಶೋಕ ಭಟ್ಟ ಸಿದ್ದಾಪುರ, ವಿನಯ ಬೇರೊಳ್ಳಿ, ವೆಂಕಟೇಶ ಬೊಗ್ರಿಮಕ್ಕಿ, ವಿನಯ ಹೊಸ್ತೋಟ ಹಾಗೂ ತುಳಸಿ ಹೆಗಡೆ ಭಾಗವಹಿಸಿದ್ದರು.

ಇದೇ ವೇಳೆ ಯಕ್ಷಗಾನ ರಂಗದ ಹಿರಿಯ ಕಲಾವಿದ ಗೋಡೆ ನಾರಾಯಣ ಹೆಗಡೆ ಅವರಿಗೆ "ಯಕ್ಷನಾಟ್ಯ ಅನುಗ್ರಹ ಪ್ರಶಸ್ತಿ" ನೀಡಿ ಗೌರವಿಸಲಾಯಿತು.

ಸಹಕಾರ ರತ್ನ ಆರ್.ಎಂ.ಹೆಗಡೆ ಬಾಳೇಸರ, ಶಾಸನ ತಂತ್ರದ ಅಧ್ಯಕ್ಷ ಮೋಹನ ಭಾಸ್ಕರ ಹೆಗಡೆ ಹೆರವಟ್ಟ, ಧಾರವಾಡ ಹಾಲು ಒಕ್ಕೂಟದ ಉಪಾಧ್ಯಕ್ಷ ಸುರೇಶ್ಚಂದ್ರ ಹೆಗಡೆ ಕೆಶಿನ್ಮನೆ, ವಿ.ಶೇಷಗಿರಿ ಭಟ್ಟ ಗುಂಜಗೋಡ, ದೇವಾಲಯದ ವಿಶ್ವಸ್ಥ ವಿನಾಯಕ ಹೆಗಡೆ ಕಲಗದ್ದೆ, ಕೊಳಗಿ ಕೇಶವ ಭಾಗವತ ಮುಂತಾದ ಗಣ್ಯರು ಉಪಸ್ಥಿತರಿದ್ದರು. ಗುಂಜಗೋಡ ಗಣಪತಿ ಹೆಗಡೆ ನಿರ್ವಹಿಸಿ, ಸನ್ಮಾನ ಪತ್ರ ವಾಚಿಸಿದರು.